**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಮೂರನೇ ಅಧಿವೇಶನ**

# ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–20)**

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 32ರ ತಿದ್ದುಪಡಿ.-** ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 32ನೇ ಪ್ರಕರಣದಲ್ಲಿ "31, 88 ಮತ್ತು 89ನೇ ಪ್ರಕರಣಗಳಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಹೊರತು" ಎಂಬ ಪದಗಳು ಮತ್ತು ಅಂಕಿಗಳ ತರುವಾಯ "ಅಥವಾ ವಿದ್ಯುನ್ಮಾನ ಸಾಧನಗಳ ಮೂಲಕ ದಸ್ತಾವೇಜನ್ನು ಹಾಜರುಪಡಿಸಿದಾಗ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. ಪ್ರಕರಣ 34ರ ತಿದ್ದುಪಡಿ.-** ಮೂಲ ಅಧಿನಿಯಮದ 34ನೇ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರಲ್ಲಿ ಪ್ರಸ್ತುತವಿರುವ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನಗಳ ಮೂಲಕ ಹಾಜರುಪಡಿಸಿದಾಗ ವ್ಯಕ್ತಿಯ ಖುದ್ದು ಹಾಜರಾತಿಯು ಅಗತ್ಯವಾಗಿರತಕ್ಕದ್ದಲ್ಲ";

(ಬಿ) ಉಪಪ್ರಕರಣ (3) ರಲ್ಲಿ (ಸಿ) ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನಗಳ ಮೂಲಕ ಹಾಜರುಪಡಿಸಿದಾಗ ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಶೀಲನೆ ಮಾಡತಕ್ಕದ್ದು; "ಮತ್ತು

(ಸಿ) ಉಪಪ್ರಕರಣ (4) ರಲ್ಲಿ "ಪರಂತುಕದ" ಎಂಬ ಪದಕ್ಕೆ ಬದಲಾಗಿ "ಮೊದಲನೇ ಪರಂತುಕದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಪ್ರಕರಣ 35ರ ತಿದ್ದುಪಡಿ.-** ಮೂಲ ಅಧಿನಿಯಮದ 35ನೇ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರ ಖಂಡ (ಎ) ನಲ್ಲಿ **"**ಖುದ್ದಾಗಿ ಹಾಜರಾದರೆ" ಎಂಬ ಪದಗಳ ತರುವಾಯ "ಅಥವಾ ಸಂದರ್ಭಾನುಸಾರ ವಿದ್ಯುನ್ಮಾನ ಸಾಧನಗಳ ಮುಖಾಂತರ ಹಾಜರುಪಡಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) ಉಪಪ್ರಕರಣ (2)ರ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

**"**ಪರಂತು ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನಗಳ ಮೂಲಕ ಹಾಜರುಪಡಿಸಿದಾಗ ವ್ಯಕ್ತಿಯ ಪರಿಶೀಲನೆಗಾಗಿ ಈ ಬಗ್ಗೆ ನಿಯಮಗಳ ಮೂಲಕ ನಿರೂಪಿಸಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು."

**5. ಪ್ರಕರಣ 57ರ ತಿದ್ದುಪಡಿ.-** ಮೂಲ ಅಧಿನಿಯಮದ 57ನೇ ಪ್ರಕರಣದ ಉಪಪ್ರಕರಣ (5)ರಲ್ಲಿ "ನೋಂದಣಿ ಅಧಿಕಾರಿಯು" ಎಂಬ ಪದಗಳ ತರುವಾಯ "ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಯಾರೇ ಇತರ ನಿಯಂತ್ರಣ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

**6. ಪ್ರಕರಣ 65ರ ತಿದ್ದುಪಡಿ.-** ಮೂಲ ಅಧಿನಿಯಮದ 65ನೇ ಪ್ರಕರಣದ ಉಪಪ್ರಕರಣ (1)ರಲ್ಲಿ "ಒಂದಕ್ಕಿಂತ" ಎಂಬ ಪದದ ಮೊದಲು "ರಾಜ್ಯದ" ಎಂಬ ಪದವನ್ನು ಸೇರಿಸತಕ್ಕದ್ದು.

**7. ಪ್ರಕರಣ 69ರ ತಿದ್ದುಪಡಿ.-** ಮೂಲ ಅಧಿನಿಯಮದ 69ನೇ ಪ್ರಕರಣದ ಉಪಪ್ರಕರಣ (1)ರಲ್ಲಿನ ಖಂಡ (ಜೆ) ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ದಸ್ತಾವೇಜನ್ನು ವಿದ್ಯುನ್ಮಾನ ಸಾಧನಗಳ ಮೂಲಕ ಹಾಜರುಪಡಿಸಿದಾಗ, ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿನ ಕಾರ್ಯವಿಧಾನ, ಒಪ್ಪುವುದಕ್ಕಾಗಿ ಹಾಜರಾತಿ, ಹಿಂಬರಹ, ಹಸ್ತಾಕ್ಷರ ಮತ್ತು ಸಹಿ ಹಾಕುವ ರೀತಿ, ನೋಂದಣಿ ಶುಲ್ಕ ಹಾಗೂ ಇತರೆ ಶುಲ್ಕದ ಪಾವತಿ ವಿಧಾನ ಮತ್ತು ಅಂಥ ಇತರೆ ಪ್ರಕ್ರಿಯೆಗಳನ್ನು ವಿನಿಯಮಿಸುವ;"

**8. ಹೊಸ ಪ್ರಕರಣ 71ಎ ರ ಸೇರ್ಪಡೆ.-** ಮೂಲ ಅಧಿನಿಯಮದ 71ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**71ಎ. ತತ್ಕಾಲದಲ್ಲಿ ಜಾರಿಯಲ್ಲಿರುವ ಕೇಂದ್ರ ಅಥವಾ ರಾಜ್ಯ ಕಾನೂನುಗಳ ಉಪಬಂಧಗಳ ಉಲ್ಲಂಘನೆಯಾಗುವ ದಸ್ತಾವೇಜುಗಳ ನೋಂದಣಿಯ ನಿರಾಕರಣೆ.-** ಈ ಅಧಿನಿಯಮದಲ್ಲಿ ಏನೇ ಇದ್ದರೂ ನೋಂದಣಿ ಅಧಿಕಾರಿಯು,-

(ಎ) ರಾಜ್ಯ ಅಥವಾ ಕೇಂದ್ರ ಸರ್ಕಾರದ ಯಾವುದೇ ಕಾನೂನು ಅಥವಾ ಸುತ್ತೋಲೆ ಅಡಿಯಲ್ಲಿ ನಿಯಂತ್ರಿಸಲಾಗಿದ್ದ, ನೋಂದಣಿ ಹಾಗೂ ಮುಟೇಷನ್ ಪ್ರಕ್ರಿಯೆಯಲ್ಲಿ ವಿದ್ಯುನ್ಮಾನ ಮಾಧ್ಯಮದ ಸಾಧನಗಳ ಮೂಲಕ, ಇತರ ಇಲಾಖೆಯ ತಂತ್ರಾಂಶದೊಂದಿಗೆ ಸಂಯೋಜಿಸಿದ ಹೊರತು ಸ್ಥಿರ ಸ್ವತ್ತಿನ ವರ್ಗಾವಣೆ, ಪರಭಾರೆ ಅಥವಾ ಅನ್ಯಥಾ ಸಂಬಂಧಿಸಿರುವ; ಮತ್ತು

(ಬಿ) ಪರಿವರ್ತನೆಯ ಆದೇಶದ ನೈಜ ಉದ್ಧೃತ, ಮಂಜೂರಾದ ಪ್ಲಾನ್, ಖಾತಾ ಮತ್ತು ತೆರಿಗೆ ನಿರ್ಧರಣೆ ವಹಿಯ ಉದ್ಧೃತ, ಹಕ್ಕು ಪತ್ರ ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಲಾದಂತೆ ಯಾವುದೇ ಇತರೆ ದಸ್ತಾವೇಜಿನಿಂದ ಲಗತ್ತಾಗಿಲ್ಲದಿದ್ದರೆ ಯಾವುದೇ ಸ್ಥಿರ ಸ್ವತ್ತಿನ ಮಾರಾಟ ಕರಾರು, ಮಾರಾಟ, ಮಾರಾಟ ವಿನಿಮಯ, ಗೇಣಿ ಅಥವಾ ಅನ್ಯಥಾ ರೂಪದಲ್ಲಿ ಸ್ಥಿರ ಸ್ವತ್ತಿನ ವರ್ಗಾವಣೆಗೆ ಸಂಬಂಧಿಸಿರುವ,

-ಯಾವುದೇ ದಸ್ತಾವೇಜನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2024-25ರ ಆಯವ್ಯಯ ಭಾಷಣದ ಖಂಡಿಕೆ ಸಂಖ್ಯೆ 407 ಮತ್ತು 408ರ ಅನುಸಾರ ಉತ್ತಮ ಆಡಳಿತ ಹಾಗೂ ನಾಗರೀಕ ಸ್ನೇಹಿ ಸುಧಾರಣೆಗಳ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಈ ಮುಂದಿನವುಗಳಿಗಾಗಿ,-

(ಎ) ಸಾರ್ವಜನಿಕ ಹಿತದೃಷ್ಟಿಯಿಂದ ಸಬ್ ರಿಜಿಸ್ಟ್ರಾರರು ಸ್ವತ್ತಿನ ನೋಂದಣಿ ಸಮಯದಲ್ಲಿ ಕೈಗೊಳ್ಳ ಬೇಕಾದ ಯುಕ್ತ ಕಾರ್ಯತತ್ಪರತೆಯನ್ನು ಖಚಿತಪಡಿಸಲು;

(ಬಿ) ನಗರ ಪ್ರದೇಶಗಳಲ್ಲಿ ಸ್ವತ್ತುಗಳ ಕಾನೂನು ಬಾಹಿರ ನೋಂದಣಿಯನ್ನು ತಡೆಯಲು ಮತ್ತು ಸ್ವತ್ತಿನ ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸಲು ಸ್ವತ್ತು ತಂತ್ರಾಂಶಗಳನ್ನು ಸಂಯೋಜಿಸಲು;

(ಸಿ) ಸಬ್ ರಿಜಿಸ್ಟ್ರಾರರ ಕಚೇರಿಗಳಲ್ಲಿ ಪಕ್ಷಕಾರರು ಖುದ್ದಾಗಿ ಹಾಜರಾಗದೆ ಕೆಲವು ಕಡ್ಡಾಯ ನೋಂದಣಿ ಯಾಗಬೇಕಾದ ದಸ್ತಾವೇಜುಗಳ ಇ-ನೋಂದಣಿ /ರಿಮೋಟ್ ನೋಂದಣಿಯನ್ನು ಜಾರಿಗೊಳಿಸಲು;ಮತ್ತು

(ಡಿ) ವಿಳಂಬವನ್ನು ತಪ್ಪಿಸಲು ಕೇಂದ್ರೀಕೃತ ವರ್ಚುವಲ್ ವಿತರಣಾ ವ್ಯವಸ್ಥೆಯ ಮೂಲಕ ಪ್ರಮಾಣೀಕೃತ ಪ್ರತಿಗಳನ್ನು ಲಭ್ಯವಾಗುವಂತೆ ಮಾಡಲು,

- ಸದರಿ ಅಧಿನಿಯಮಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ
# ನೋಂದಣಿ ಅಧಿನಿಯಮ, 1908
# (1908ರ ಕೇಂದ್ರ ಅಧಿನಿಯಮ 16)ರ ಉದ್ಧೃತ ಭಾಗ

**XX XX XX**

**32. ನೋಂದಣಿಗಾಗಿ ದಸ್ತಾವೇಜುಗಳನ್ನು ಹಾಜರುಪಡಿಸುವ ವ್ಯಕ್ತಿಗಳು.-** 31, 88 ಮತ್ತು 89ನೇ ಪ್ರಕರಣಗಳಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಹೊರತು ಈ ಅಧಿನಿಯಮದ ಮೇರೆಗೆ ನೋಂದಣಿಯಾಗಬೇಕಾದ ಪ್ರತಿಯೊಂದು ದಸ್ತಾವೇಜನ್ನು ಅಂಥ ನೋಂದಣಿಯು ಕಡ್ಡಾಯವಾಗಿ ಇರಲಿ ಅಥವಾ ಐಚ್ಛಿಕವಾಗಿ ಇರಲಿ ಸರಿಯಾದ ನೋಂದಣಿ ಕಚೇರಿಯಲ್ಲಿ,-

(ಎ) ಅದನ್ನು ಬರೆದುಕೊಡುವ ಅಥವಾ ಅದರ ಮೇರೆಗೆ ಕ್ಲೇಮು ಮಾಡುವ ಅಥವಾ ಡಿಕ್ರಿ ಅಥವಾ ಆದೇಶದ ಪ್ರತಿಯ ಸಂದರ್ಭದಲ್ಲಿ ಆ ಡಿಕ್ರಿ ಅಥವಾ ಆದೇಶದ ಮೇರೆಗೆ ಕ್ಲೇಮು ಮಾಡುವ ವ್ಯಕ್ತಿಯು; ಅಥವಾ

(ಬಿ) ಅಂಥ ವ್ಯಕ್ತಿಯ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವನು;

(ಸಿ) ಅಂಥ ವ್ಯಕ್ತಿಯ ಏಜೆಂಟನು ಅಥವಾ ಇಲ್ಲಿ ಇನ್ನು ಮುಂದೆ ನಮೂದಿಸಿದ ರೀತಿಯಲ್ಲಿ ಬರೆದುಕೊಟ್ಟ ಮತ್ತು ಅಧಿಪ್ರಮಾಣನಗೊಳಿಸಿದ ಮುಖ್ತ್ಯಾರನಾಮೆ ಮೂಲಕ ಕ್ರಮಬದ್ಧವಾಗಿ ಅಧಿಕೃತನಾದ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವನು ಹಾಜರುಪಡಿಸತಕ್ಕದ್ದು.

**XX XX XX**

**34. ನೋಂದಣಿಗೆ ಮುಂಚೆ ನೋಂದಣಿ ಅಧಿಕಾರಿಯಿಂದ ವಿಚಾರಣೆ.-** (1) ಈ ಭಾಗದಲ್ಲಿ ಮತ್ತು 41, 43, 45, 69, 75, 77, 88 ಮತ್ತು 89ನೇ ಪ್ರಕರಣಗಳಲ್ಲಿ ಅಡಕಗೊಂಡಿರುವ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಯಾವುದೇ ದಸ್ತಾವೇಜನ್ನು, ಅಂಥ ದಸ್ತಾವೇಜನ್ನು ಬರೆದುಕೊಡುವ ವ್ಯಕ್ತಿಗಳು ಅಥವಾ ಅವರ ಪ್ರತಿನಿಧಿಗಳು, ಹಸ್ತಾಂತರ ಪಡೆದವರು, ಅಥವಾ ಹಿಂದೆ ಹೇಳಿದಂತೆ ಅಧಿಕೃತರಾದ ಏಜೆಂಟರು 23, 24, 25 ಮತ್ತು 26ನೇ ಪ್ರಕರಣಗಳ ಮೇರೆಗೆ ಹಾಜರುಪಡಿಸುವುದಕ್ಕೆ ಅನುಮತಿಸಿದ ಕಾಲದೊಳಗೆ ನೋಂದಣಿ ಅಧಿಕಾರಿಯ ಮುಂದೆ ಹಾಜರಾಗದ ಹೊರತು, ನೋಂದಣಿ ಮಾಡತಕ್ಕದ್ದಲ್ಲ.

ಪರಂತು, ಜರೂರು ಅಗತ್ಯತೆ ಅಥವಾ ಅನಿವಾರ್ಯ ಆಕಸ್ಮಿಕದ ಕಾರಣದಿಂದಾಗಿ ಅಂಥ ಎಲ್ಲಾ ವ್ಯಕ್ತಿಗಳು ಹಾಗೆ ಹಾಜರಾಗದಿದ್ದರೆ ರಿಜಿಸ್ಟ್ರಾರನು, ಹಾಜರಾಗುವುದರಲ್ಲಿನ ವಿಳಂಬವು ನಾಲ್ಕು ತಿಂಗಳುಗಳನ್ನು ಮೀರದ ಸಂದರ್ಭಗಳಲ್ಲಿ, ರಿಜಿಸ್ಟ್ರಾರನು, 25ನೇ ಪ್ರಕರಣದ ಮೇರೆಗೆ ಸಂದಾಯವಾಗವೇಕಾದ ಜುಲ್ಮಾನೆ ಯಾವುದಾದರೂ ಇದ್ದರೆ, ಅದರ ಜೊತೆಗೆ, ಸರಿಯಾದ ನೋಂದಣಿ ಫೀಜಿನ ಮೊಬಲಗಿನ ಹತ್ತರಷ್ಟಕ್ಕೆ ಮೀರದ ಜುಲ್ಮಾನೆಯನ್ನು ಸಂದಾಯ ಮಾಡಿದ ಮೇಲೆ ದಸ್ತಾವೇಜ್ನನು ನೋಂದಣಿ ಮಾಡಬಹುದೆಂದು ನಿರ್ದೇಶಿಸಬಹುದು.

(2) (1)ನೇ ಉಪ ಪ್ರಕರಣದ ಮೇರೆಗಿನ ಹಾಜರಾತಿಗಳು ಏಕಕಾಲದಲ್ಲಿರಬಹುದು ಅಥವಾ ಬೇರೆ ಬೇರೆ ಕಾಲಗಳಲ್ಲಿ ಇರಬಹುದು.

(3) ನೋಂದಣಿ ಅಧಿಕಾರಿಯು ಅನಂತರ-

(ಎ) ಅಂಥ ದಸ್ತಾವೇಜನ್ನು ಯಾವ ವ್ಯಕ್ತಿಗಳು ಬರೆದುಕೊಟ್ಟಿರುವರೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಗಳು ಬರೆದುಕೊಟ್ಟಿರುವರೋ ಅಥವಾ ಇಲ್ಲವೋ ಎಂಬ ಬಗ್ಗೆ ವಿಚಾರಣೆ ಮಾಡತಕ್ಕುದ್ದು;

(ಬಿ) ಅವನ ಮುಂದೆ ಹಾಜರಾಗುವ ಮತ್ತು ದಸ್ತಾವೇಜನ್ನು ಬರೆದುಕೊಟ್ಟಿರುವುದಾಗಿ ಹೇಳುವ ವ್ಯಕ್ತಿಗಳನ್ನು ಗುರುತಿಸುವ ಬಗ್ಗೆ ಸ್ವತ: ಮನದಟ್ಟು ಮಾಡಿಕೊಳ್ಳತಕ್ಕುದು; ಮತ್ತು

(ಸಿ) ಪ್ರತಿನಿಧಿಯಾಗಿ, ಹಸ್ತಾಂತರ ಪಡೆದವನಾಗಿ ಅಥವಾ ಏಜೆಂಟನಾಗಿ ಹಾಜರಾಗುವ ಯಾವನೇ ವ್ಯಕ್ತಿಯ ಸಂದರ್ಭದಲ್ಲಿ ಹಾಗೆ ಹಾಜರಾಗಲು ಅಂಥ ವ್ಯಕ್ತಿಯ ಹಕ್ಕಿನ ಬಗ್ಗೆ ಸ್ವತ: ಮನದಟ್ಟು ಮಾಡಿಕೊಳ್ಳತಕ್ಕುದು;

(4) (1)ನೇ ಉಪ ಪ್ರಕರಣದ ಪರಂತುಕದ ಮೇರೆಗಿನ ನಿರ್ದೇಶನಕ್ಕಾಗಿನ ಯಾವುದೇ ಅರ್ಜಿಯನ್ನು ಸಬ್‍ರಿಜಿಸ್ಟ್ರಾರನ ಮುಂದೆ ಮಾಡಿಕೊಳ್ಳಬಹುದು, ಅವನು ತಾನು ಅಧೀನನಾಗಿರುವ ಆ ರಿಜಿಸ್ಟ್ರಾರನಿಗೆ ಅದನ್ನು ತತ್‍ಕ್ಷಣವೇ ಕಳುಹಿಸತಕ್ಕದ್ದು.

(5) ಈ ಪ್ರಕರಣದಲ್ಲಿರುವುದು ಯಾವುದೂ ಡಿಕ್ರಿಗಳ ಅಥವಾ ಆದೇಶಗಳ ಪ್ರತಿಗಳಿಗೆ ಅನ್ವಯಿಸತಕ್ಕದ್ದಲ್ಲ.

**35. ಅನುಕ್ರಮವಾಗಿ ಬರೆದುಕೊಡುವುದನ್ನು ಒಪ್ಪುವ ಮತ್ತು ನಿರಾಕರಿಸುವುದರ ಮೇಲೆ ಪ್ರಕ್ರಿಯೆ.-**

(ಎ) ದಸ್ತಾವೇಜನ್ನು ಬರೆದುಕೊಡುವ ಎಲ್ಲ ವ್ಯಕ್ತಿಗಳು ನೋಂದಣಿ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾದರೆ ಮತ್ತು ಅವನಿಗೆ ಖುದ್ದಾಗಿ ಗೊತ್ತಿದ್ದರೆ ಅಥವಾ ಆ ವ್ಯಕ್ತಿಗಳುತಾವೇ ಎಂದು ಹೇಳಿಕೊಳ್ಳುವ ವ್ಯಕ್ತಿಗಳಾಗಿದ್ದಾರೆಂದು ಅನ್ಯಥಾ ಮನದಟ್ಟಾದರೆ ಮತ್ತು ದಸ್ತಾವೇಜನ್ನು ಬರೆದುಕೊಟ್ಟಿರುವುದನ್ನು ಅವರು ಎಲ್ಲ ಒಪ್ಪಿದರ; ಅಥವಾ

(ಬಿ) ಪ್ರತಿನಿಧಿ, ಹಸ್ತಾಂತರ ಪಡೆದವನು ಅಥವಾ ಏಜೆಂಟನ ಮೂಲಕ ಹಾಜರಾಗುವ ಯಾವನೇ ವ್ಯಕ್ತಿಯ ಸಂದರ್ಭದಲ್ಲಿ ಅಂಥ ಪ್ರತಿನಿಧಿ, ಹಸ್ತಾಂತರ ಪಡೆದವನು ಅಥವಾ ಏಜೆಂಟನು ಬರೆದುಕೊಟ್ಟಿರುವುದನ್ನು ಒಪ್ಪಿದರೆ; ಅಥವಾ

(ಸಿ) ದಸ್ತಾವೇಜನ್ನು ಬರೆದುಕೊಟ್ಟಿರುವ ವ್ಯಕ್ತಿಯು ಮರಣ ಹೊಂದಿದ್ದರೆ ಮತ್ತು ಅವನ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವನು ನೋಂದಣಿ ಅಧಿಕಾರಿಯ ಮುಂದೆ ಹಾಜರಾದರೆ ಮತ್ತು ಬರೆದುಕೊಟ್ಟಿರುವುದನ್ನು ಒಪ್ಪಿದರೆ

- ನೋಂದಣಿ ಅಧಿಕಾರಿಯು ದಸ್ತಾವೇಜನ್ನು 58ರಿಂದ 61ನೇ ಪ್ರಕರಣಗಳಲ್ಲಿ, ಇವೆರಡೂ ಪ್ರಕರಣಗಳನ್ನು ಒಳಗೊಂಡು, ನಿರ್ದೇಶಿಸಿದಂತೆ ದಸ್ತಾವೇಜನ್ನು ನೋಂದಣಿ ಮಾಡತಕ್ಕದು.

(2) ನೋಂದಣಿ ಅಧಿಕಾರಿಯು, ತನ್ನ ಮುಂದೆ ಹಾಜರಾಗುವ ವ್ಯಕ್ತಿಗಳು ತಾವೆಂದು ಹೇಳಿಕೊಳ್ಳುವ ವ್ಯಕ್ತಿಗಳಾಗಿದ್ದಾರೆಂದು ಮನದಟ್ಟು ಮಾಡಿಕೊಳ್ಳುವುದಕ್ಕಾಗಿ ಅಥವಾ ಈ ಅಧಿನಿಯಮದ ಮೂಲಕ ಆಲೋಚಿಸಲಾದ ಯಾವುದೇ ಇತರ ಉದ್ದೇಶಕ್ಕಾಗಿ ಅವನ ಕಚೇರಿಯಲ್ಲಿ ಹಾಜರಿರುವ ಯಾವನನ್ನೇ ಆಗಲಿ ಪರೀಕ್ಷಿಸಬಹುದು.

(3) (ಎ) ದಸ್ತಾವೇಜನ್ನು ಬರೆದುಕೊಟ್ಟಿರುವುದಾಗಿ ತಾತ್ಪರ್ಯವಾಗುವ ಯಾವನೇ ವ್ಯಕ್ತಿಯು ಅದನ್ನು ಬರೆದುಕೊಟ್ಟಿರುವುದನ್ನು ನಿರಾಕರಿಸಿದರೆ; ಅಥವಾ

(ಬಿ) ಅಂಥ ಯಾವನೇ ವ್ಯಕ್ತಿಯು ನೋಂದಣಿ ಅಧಿಕಾರಿಗೆ ಅಪ್ರಾಪ್ತ ವಯಸ್ಕ, ಹುಟ್ಟು ದಡ್ಡ ಅಥವಾ ಹುಚ್ಚನಾಗಿ ಕಂಡುಬಂದರೆ; ಅಥವಾ

(ಸಿ) ದಸ್ತಾವೇಜನ್ನು ಬರೆದುಕೊಟ್ಟಿರುವುದಾಗಿ ತಾತ್ಪರ್ಯವಾಗುವ ಯಾವನೇ ವ್ಯಕ್ತಿಯು ಮರಣ ಹೊಂದಿದರೆ ಮತ್ತು ಅವನ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವನು ಅದನ್ನು ಬರೆದುಕೊಟ್ಟಿರುವುದನ್ನು ನಿರಾಕರಿಸಿದರೆ

- ನೋಂದಣಿ ಅಧಿಕಾರಿಯು, ಹಾಗೆ ನಿರಾಕರಿಸುವ, ಕಂಡು ಬರುವ ಅಥವಾ ಮೃತನಾದ ವ್ಯಕ್ತಿಯ ಬಗ್ಗೆ ದಸ್ತಾವೇಜನ್ನು ನೋಂದಾಯಿಸಲು ನಿರಾಕರಿಸತಕ್ಕದ್ದು;

ಪರಂತು, ಅಂಥ ಅಧಿಕಾರಿಯು ರಿಜಿಸ್ಟ್ರಾರನಾಗಿರುವಲ್ಲಿ, ಅವನು ಭಾಗ-XIIರಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು;

ಮತ್ತೂ ಪರಂತು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ಹೆಸರಿಸಿದ ಯಾವನೇ ಸಬ್‌ರಿಜಿಸ್ಟ್ರಾರನನ್ನು, ಯಾವ ದಸ್ತಾವೇಜನ್ನು ಬರೆದು ಕೊಟ್ಟಿರುವುದನ್ನು ನಿರಾಕರಿಸಲಾಗಿದೆಯೋ ಆ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ ಈ ಉಪಪ್ರಕರಣದ ಮತ್ತು XIIನೇ ಭಾಗದ ಉದ್ದೇಶಗಳಿಗಾಗಿ ರಿಜಿಸ್ಟ್ರಾರನೆಂಬುದಾಗಿ ಭಾವಿಸತಕ್ಕದ್ದು.

**X X XX XX**

**57. ನೋಂದಣಿ ಅಧಿಕಾರಿಗಳು ಕೆಲವು ಪುಸ್ತಕಗಳ ಮತ್ತು ಸೂಚಿಗಳ ಪರಿಶೀಲನೆಗೆ ಅನುಮತಿಸತಕ್ಕದ್ದು ಮತ್ತು ನಮೂದುಗಳ ಪ್ರಮಾಣೀಕೃತ ಪ್ರತಿಗಳನ್ನು ಕೊಡತಕ್ಕದ್ದು.-** (1) ಈ ಬಗ್ಗೆ ಸಂದಾಯ ಮಾಡಬೇಕಾದ ಫೀಜಿನ ಪೂರ್ವ ಸಂದಾಯಕ್ಕೆ ಒಳಪಟ್ಟು ಪುಸ್ತಕಗಳ ಸಂಖ್ಯೆ 1 ಮತ್ತು 2ರಲ್ಲಿ ಮತ್ತು ಪುಸ್ತಕ ಸಂಖ್ಯೆ 1ಕ್ಕೆ ಸಂಬಂಧಿಸಿದ ವಿಷಯ ಸೂಚಿಗಳು ಅವುಗಳನ್ನು ಪರಿಶೀಲಿಸಲು ಅರ್ಜಿಯನ್ನು ಸಲ್ಲಿಸುವ ಯಾವನೇ ವ್ಯಕ್ತಿಯ ಪರಿಶೀಲನೆಗೆ ಎಲ್ಲಾ ಕಾಲದಲ್ಲಿ ಮುಕ್ತವಾಗಿರತಕ್ಕದ್ದು ಮತ್ತು 62ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂಥ ಪುಸ್ತಕಗಳಲ್ಲಿ ನಮೂದುಗಳ ಪ್ರತಿಗಳನ್ನು ಅಂಥ ಪ್ರತಿಗಳಿಗಾಗಿ ಅರ್ಜಿಯನ್ನು ಸಲ್ಲಿಸುವ ಎಲ್ಲ ವ್ಯಕ್ತಿಗಳಿಗೆ ಕೊಡತಕ್ಕದ್ದು.

(2) ಅವೇ ಉಪಬಂಧಗಳಿಗೆ ಒಳಪಟ್ಟು ಪುಸ್ತಕ ಸಂಖ್ಯೆ 3 ಮತ್ತು ಅದಕ್ಕೆ ಸಂಬಂಧಿಸಿದ ಸೂಚಿಯಲ್ಲಿನ ನಮೂದುಗಳ ಪ್ರತಿಗಳನ್ನು ಅಂಥ ನಮೂದುಗಳು ಸಂಬಂಧಪಡುವಂಥ ದಸ್ತಾವೇಜುಗಳನ್ನು

ಬರೆದುಕೊಡುವ ವ್ಯಕ್ತಿಗಳಿಗೆ ಅಥವಾ ಅವರ ಏಜೆಂಟರಿಗೆ ಮತ್ತು ಬರೆದುಕೊಟ್ಟವರ ಮರಣಾನಂತರ (ಆದರೆ ಅದಕ್ಕೆ ಮುಂಚೆ ಅಲ್ಲ) ಅಂಥ ಪ್ರತಿಗಳಿಗಾಗಿ ಅರ್ಜಿ ಸಲ್ಲಿಸುವ ಯಾವನೇ ವ್ಯಕ್ತಿಗೆ ಕೊಡತಕ್ಕುದು.

(3) ಅವೇ ಉಪಬಂಧಗಳಿಗೆ ಒಳಪಟ್ಟು ಪುಸ್ತಕ ಸಂಖ್ಯೆ 4 ಮತ್ತು ಅದಕ್ಕೆ ಸಂಬಂಧಿಸಿದ ಸೂಚಿಯಲ್ಲಿನ ನಮೂದುಗಳ ಪ್ರತಿಗಳನ್ನು ಅಂಥ ನಮೂದುಗಳು ಅನುಕ್ರಮವಾಗಿ ಸಂಬಂಧಪಡುವಂಥ ದಸ್ತಾವೇಜುಗಳನ್ನು ಬರೆದುಕೊಡುವ ಅಥವಾ ಅವುಗಳ ಮೇರೆಗೆ ಕ್ಲೇಮು ಮಾಡುವ ಯಾವನೇ ವ್ಯಕ್ತಿಗೆ ಅಥವಾ ಅವನ ಏಜೆಂಟ್ ಅಥವಾ ಪ್ರತಿನಿಧಿಗೆ ಕೊಡತಕ್ಕದ್ದು.

(4) ಪುಸ್ತಕಗಳ ಸಂಖ್ಯೆ 3 ಮತ್ತು 4ರಲ್ಲಿನ ನಮೂದುಗಳಿಗಾಗಿ ಈ ಪ್ರಕರಣದ ಮೇರೆಗೆ ಅವಶ್ಯವಿರುವ ಶೋಧನೆಯನ್ನು ನೋಂದಣಿ ಅಧಿಕಾರಿಯು ಮಾತ್ರವೇ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಕೊಟ್ಟ ಎಲ್ಲ ಪ್ರತಿಗಳಿಗೆ ನೋಂದಣಿ ಅಧಿಕಾರಿಯು ರುಜು ಮಾಡತಕ್ಕದ್ದು ಮತ್ತು ಮೊಹರು ಹಾಕತಕ್ಕದ್ದು ಮತ್ತು ಮೂಲ ದಸ್ತಾವೇಜುಗಳ ಒಳಾಂಶಗಳನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಅವು ಅಂಗೀಕಾರಾರ್ಹವಾಗಿರತಕ್ಕದ್ದು.

**X X XX XX**

**65. ವಿವಿಧ ಜಿಲ್ಲೆಗಳಲ್ಲಿನ ಭೂಮಿಗೆ ದಸ್ತಾವೇಜು ಸಂಬಂಧಪಟ್ಟಿರುವಲ್ಲಿ ಪ್ರಕ್ರಿಯೆ.**-(1) ಪ್ರತಿಯೊಬ್ಬ ಸಬ್-ರಿಜಿಸ್ಟ್ರಾರನು ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿನ ಸ್ಥಿರಸ್ವತ್ತಿಗೆ ಸಂಬಂಧಪಟ್ಟ ಮರಣ ಶಾಸನೇತರ ದಸ್ತಾವೇಜನ್ನು ನೋಂದಣಿ ಮಾಡಿದ ಮೇಲೆ, ಅದರ ಪ್ರತಿಯನ್ನು ಮತ್ತು ಅದರ ಮೇಲಿನ ಹಿಂಬರಹ ಹಾಗೂ ಪ್ರಮಾಣಪತ್ರದ (ಯಾವುದಾದರೂ ಇದ್ದರೆ) ಪ್ರತಿಯನ್ನು 21ನೇ ಪ್ರಕರಣದಲ್ಲಿ ನಮೂದಿಸಿದ ಭೂಪಟ ಅಥವಾ ನಕ್ಷೆ ಯಾವುದಾದರೂ ಇದ್ದರೆ ಅದರ ಪ್ರತಿಯೊಂದಿಗೆ ತನ್ನ ಉಪಜಿಲ್ಲೆಯಲ್ಲಿರುವಂಥ ಜಿಲ್ಲೆಯನ್ನು ಹೊರತಂಪಡಿಸಿ ಅಂಥ ಸ್ವತ್ತಿನ ಯಾವುದೇ ಭಾಗವು ಇರುವಂಥ ಪ್ರತಿಯೊಂದು ಜಿಲ್ಲೆಯ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು.

(2) ರಿಜಿಸ್ಟ್ರಾರನು ಅದನ್ನು ಸ್ವೀಕರಿಸಿದ ಮೇಲೆ ದಸ್ತಾವೇಜಿನ ಪ್ರತಿ ಮತ್ತು ಭೂಪಟ ಅಥವಾ ನಕ್ಷೆಯ (ಯಾವುದಾದರೂ ಇದ್ದರೆ) ಪ್ರತಿಯನ್ನು ಅವನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲ್ಮಾಡತಕ್ಕುದು ಮತ್ತು ಯಾರ ಉಪ ಜಿಲ್ಲೆಯೊಳಗೆ ಅಂಥ ಸ್ವತ್ತಿನ ಯಾವುದೇ ಭಾಗವು ಇರುವುದೋ ಆ ಉಪ-ಜಿಲ್ಲೆಯೊಳಗೆ ಅವನಿಗೆ ಅಧೀನನಾಗಿರುವ ಪ್ರತಿಯೊಬ್ಬ ಸಬ್‌ರಿಜಿಸ್ಟ್ರಾರನಿಗೆ ದಸ್ತಾವೇಜಿನ ವಿವರಣ ಪತ್ರವನ್ನು ಕಳುಹಿಸತಕ್ಕದ್ದು ಮತ್ತು ಅಥ ವಿವರಣಾ ಪತ್ರವನ್ನು ಸ್ವೀಕರಿಸುವ ಪ್ರತಿಯೊಬ್ಬ ಸಬ್‌ರಿಜಿಸ್ಟ್ರಾರನು ಅದನ್ನು ಅವನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲ್ಮಾಡತಕ್ಕುದು.

**X X XX XX**

**69. ನೋಂದಣಿ ಕಚೇರಿಗಳನ್ನು ಅಧೀಕ್ಷಿಸಲು ಮತ್ತು ನಿಯಮಗಳನ್ನು ರಚಿಸಲು ಇನ್‌ಸ್ಪೆಕ್ಟರ್ ಜನರಲ್ಲನ ಅಧಿಕಾರ.**-(1) ಇನ್‌ಸ್ಪೆಕ್ಟರ್ ಜನರಲ್ಲನು ರಾಜ್ಯಸರ್ಕಾರದ ಅಧೀನದಲ್ಲಿರುವ ರಾಜ್ಯ ಕ್ಷೇತ್ರಗಳಲ್ಲಿರುವ ಎಲ್ಲಾ ನೋಂದಣಿ ಕಚೇರಿಗಳ ಮೇಲೆ ಸಾಮಾನ್ಯ ಅಧೀಕ್ಷಣೆ ನಡೆಸತಕ್ಕದ್ದು ಮತ್ತು,-

(ಎ) ಪುಸ್ತಕಗಳ, ಕಾಗದಪತ್ರಗಳ ಮತ್ತು ದಸ್ತಾವೇಜುಗಳ ಸುರಕ್ಷಿತ ಅಭಿರಕ್ಷೆಗಾಗಿ ಅವಕಾಶ ಮಾಡಿಕೊಡುವ;

(ಬಿ) ಪ್ರತಿಯೊಂದು ಜಿಲ್ಲೆಯಲ್ಲಿ ಯಾವ ಭಾಷೆಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದೆಯೆಂದು ಭಾವಿಸತಕ್ಕುದೆಂದು ಘೋಷಿಸುವ;

(ಸಿ) 21ನೇ ಪ್ರಕರಣದ ಮೇರೆಗೆ ಯಾವ ಪ್ರಾದೇಶಿಕ ವಿಭಾಗಗಳನ್ನು ಮಾನ್ಯ ಮಾಡತಕ್ಕದ್ದು ಎಂಬುದನ್ನು ವಿನಿಯಮಿಸುವ;

(ಡಿ) ಅನುಕ್ರಮವಾಗಿ 25 ಮತ್ತು 34ನೇ ಪ್ರಕರಣದ ಮೇರೆಗೆ ವಿಧಿಸಿದ ಜುಲ್ಮಾನೆಗಳ ಮೊಬಲಗನ್ನು ವಿನಿಯಮಿಸುವ;

(ಇ) 63ನೇ ಪ್ರಕರಣದ ಮೂಲಕ ನೋಂದಣಿ ಅಧಿಕಾರಿಗೆ ಒಪ್ಪಿಸಿದ ವಿವೇಚನೆಯನ್ನು ಚಲಾಯಿಸುವುದನ್ನು ವಿನಿಯಮಿಸುವ;

(ಎಫ್) ನೋಂದಣಿ ಅಧಿಕಾರಿಗಳು ಯಾವ ನಮೂನೆಯಲ್ಲಿ ದಸ್ತಾವೇಜುಗಳ ವಿವರಣ ಪತ್ರಗಳನ್ನು ಮಾಡಬೇಕೆಂಬುದನ್ನು ವಿನಿಯಮಿಸುವ;

(ಜಿ) ರಿಜಿಸ್ಟ್ರಾರರು ಮತ್ತು ಸಬ್ ರಿಜಿಸ್ಟ್ರಾರರು ಅನುಕ್ರಮವಾಗಿ ತಮ್ಮ ಕಚೇರಿಗಳಲ್ಲಿ 51ನೇ ಪ್ರಕರಣದ ಮೇರೆಗೆ ಇಟ್ಟಿರುವ ಪುಸ್ತಕಗಳನ್ನು ಅಧಿಪ್ರಮಾಣನ ಮಾಡುವುದನ್ನು ವಿನಿಯಮಿಸುವ;

(ಜಿ1) 88ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪತ್ರಗಳನ್ನು ನೋಂದಣಿಗಾಗಿ ಹಾಜರುಪಡಿಸಬಹುದಾದಂಥ ರೀತಿಯನ್ನು ವಿನಿಯಮಿಸುವ;

(ಎಚ್) ಅನುಕ್ರಮವಾಗಿ ಸೂಚಿಗಳ ಸಂಖ್ಯೆ I, II III ಮತ್ತು IVರಲ್ಲಿ ಅಡಕವಾಗಬೇಕಾದ ವಿವರಗಳನ್ನು ಘೋಷಿಸುವ;

(ಐ) ನೋಂದಣಿ ಕಚೇರಿಗಳಲ್ಲಿ ಆಚರಿಸತಕ್ಕ ರಜಾದಿನಗಳನ್ನು ಘೋಷಿಸುವ; ಮತ್ತು

(ಜೆ) ರಿಜಿಸ್ಟ್ರಾರ್ ಮತ್ತು ಸಬ್‌ರಿಜಿಸ್ಟ್ರಾರರ ವ್ಯವಹರಣೆಗಳನ್ನು ಸಾಮಾನ್ಯವಾಗಿ ವಿನಿಯಮಿಸುವ, ಈ ಅಧಿನಿಯಮಕ್ಕೆ ಸಂಸಂಗತವಾದ ನಿಯಮಗಳನ್ನು ಕಾಲಕಾಲಕ್ಕೆ ರಚಿಸಲು ಅಧಿಕಾರವನ್ನು ಹೊಂದಿರತಕ್ಕುದು.

(2) ಹಾಗೆ ರಚಿಸಿದ ನಿಯಮಗಳನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅವುಗಳನ್ನು ಅನುಮೋದಿಸಿದ ತರುವಾಯ ಸರ್ಕಾರಿ ರಾಜಪತ್ರದಲ್ಲಿ ಅವುಗಳನ್ನು ಪ್ರಕಟಿಸತಕ್ಕದು ಮತ್ತು ಪ್ರಕಟಣೆಯಾದ ಮೇಲೆ ಅವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕುದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 20ನೇ ಫೆಬ್ರವರಿ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**THIRD SESSION**

# THE REGISTRATION (KARNATAKA AMENDMENT) BILL, 2024
## (LA Bill No. 20 of 2024)

A Bill further to amend the Registration Act. 1908 (Central Act 16 of 1908) in its application to the State of Karnataka.

Whereas it is expedient further to amend the Registration Act 1908 (Central Act 16 of 1908) in its application to the State of Karnataka for the purposes hereinafter appearing;

Be it enacted by the Karnataka State legislature in the seventy sixth year of the Republic of India as follows:-

**1. Short title and commencement.-** (1) This Act may be called the Registration (Karnataka Amendment) Act, 2024.

(2) It shall come into force on such date as the State Government may, by notification in the Official Gazette, appoint

**2. Amendment of section 32.-** In the Registration Act 1908 (Central Act 16 of 1908) (hereinafter referred to as the Principal Act) in section 32, after the words and figures, "Except in the cases mentioned in sections 31,88 and 89" the words "or when the document is presented by electronic means" shall be inserted.

**3. Amendment of section 34.-** In section 34 of the Principal Act,-

(a) in sub-section (1), after the existing proviso, the following proviso shall be inserted, namely:-

"Provided further that, when such document is presented by electronic means, the personal appearance shall not be required.";

(b) in sub-section (3), after clause (c), the following proviso shall be inserted, namely:-

"Provided that, when such document is presented by electronic means, the enquiry shall be done in such manner as may be prescribed.";

(c) in sub-section (4), for the words "proviso to", the words "first proviso to" shall be substituted; and

**4. Amendment of section 35.-** In section 35 of the Principal Act,-

(a) in sub-section (1), in clause (a), after the words, "appear personally", the words, "or through electronic means, as the case may be," shall be inserted.; and

(b) after sub-section (2), the following proviso shall be inserted, namely:-

"Provided that, when such document is presented by electronic means, the procedure laid down by the rules made in this behalf shall be followed for examination of the person."

**5. Amendment of section 57.-**In the Principal Act, in section 57, in sub-section (5), after the words "shall be signed and sealed by the Registering officer", the words, "or any other Controlling Officer as specified by the State Government" shall be inserted.

**6. Amendment of section 65.-** In the Principal Act, in section 65, in sub-section (1) after the words "than one", the words, "of the State" shall be inserted.

**7. Amendment of section 69:-** In section 69 of the Principal Act, in sub-section (1), after clause (j), the following clause shall be inserted, namely:-

"(j-1) regulating the procedure for presentation of document, appearance for admission, endorsement, manner of fixing signature and seal, mode of payment of registration fees and other fees and such other process, when the document is presented by electronic means."

**8. Insertion of new section 71-A.-** In the Principal Act, after section 71, the following shall be inserted, namely:-

**"71-A. Refusal of registration of documents which are in contravention of the provisions of the Central or State Laws for the time being in force.-** Notwithstanding anything contained in this Act, the Registering Officer shall refuse to register any document,-

(a) relating to transfer of immovable property, the alienation or transfer or otherwise which is governed under any law or circular of the State Government or the Central Government other than through integration with other Department software by means of electronic media in the process of registration and mutation; and

(b) relating to transfer by way of agreement for sale, sale, sale exchange, lease or otherwise of immovable property if not accompanied by true extract of conversion order, sanctioned plan, extract of khatha and Tax assessment register, title deed and any other document as prescribed by the State Government from time to time."

## STATEMENT OF OBJECTS AND REASONS

It is considered necessary further to amend the Registration Act, 1908 (Central Act 16 of 1908) in its application to the State of Karnataka for the purpose of good governance and citizen friendly reforms as per 2024-25 Budget Speech para number 407 and 408 hereinafter appearing,-

(a) to ensure due diligence in public interest is under taken by the Sub - Registrar at the time of registration of property;

(b) property softwares will be integrated to prevent illegal registration of properties in urban areas also and to simplify property registration;

(c ) to enable e-Registration / Remote Registration of some compulsory registrable documents without the physical presence of either party in the Sub-Registrar's offices; and

(d) certified copies will be made available through a centralized virtual distribution system to avoid delay.

Hence, the Bill

**FINANCIAL MEMORANDUM**

There is no extra expenditure involved in the proposed legislative measure.

**KRISHNA BYREGOWDA**
Minister for Revenue

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE REGISTRATION ACT, 1908

## (CENTRAL ACT 16 OF 1908)

**xxx** **xxx** **xxx**

**32. Persons to present documents for registration.-**Except in the cases mentioned in 35[sections 31, 88 and 89], every document to be registered under this Act, whether such registration be compulsory or optional, shall be presented at the proper registration office,-

(a) by some person executing or claiming under the same, or, in the case of a copy of a decree or order, claiming under the decree or order, or

(b) by the representative or assign of such person, or

(c) by the agent of such person, representative or assign duly authorized 'by power-of-attorney executed and authenticated in manner hereinafter mentioned.

**34. Enquiry before registration by registering officer.-**(l) Subject to the provisions contained in this Part and in sections 41, 43, 45, 69, 75, 77, 88 and 89, no document shall be registered under this Act, unless the persons executing such document, or their representatives, assigns or agents authorized as aforesaid, appear before the registering officer within the time allowed for presentation under sections 23, 24, 25 and 26:

Provided that, if owing to urgent necessity or unavoidable accident all such persons do not so appear, the Registrar, in cases where the delay in appearing does not exceed four months, may direct that on payment of a fine not exceeding ten times the amount of the proper registration fee, in addition to the fine, if any, payable under section 25, the document may be registered.

(2) Appearances under sub-section (1) may be simultaneous or at different times.

(3) The registering officer shall thereupon-

(a) Enquire whether or not such document was executed by the persons by whom it purports to have been executed;

(b) satisfy himself as to the identity of the persons appearing before him and alleging that they have executed the document; and

(c) in the case of any person appearing as a representative, assign or agent, satisfy himself of the right of such person so to appear.

(4) Any application for a direction under the proviso to sub-section (1) may be lodged with a Sub-Registrar, who shall forthwith forward it to the Registrar to whom he is subordinate.

(5) Nothing in this section applies to copies of decrees or orders.

**35. Procedure on admission and denial of execution respectively.-**

(1) (a) If all the persons executing the document appear personally before the registering officer and are personally known to him, or if he be otherwise satisfied that they are the persons they represent themselves to be, and if they all admit the execution of the document, or

(b) if in the case of any person appearing by a representative, assign or agent, such representative, assign or agent admits the execution, or

(c) if the person executing the document is dead, and his representative or assign appears before the registering officer and admits the execution, the registering officer shall register the document as directed in sections 58 to 61, inclusive.

(2) The registering officer may, in order to satisfy himself that the persons appearing before him are the persons they represent themselves to be, or for any other purpose contemplated by this Act, examine anyone present in his office.

(3)(a) If any person by whom the document purports to be executed denies its execution, or

(b) if any such person appears to the registering officer to be a minor, an idiot or a lunatic, or

(c) if any person by whom the document purports to be executed is dead, and his representative or assign denies its execution,

the registering officer shall refuse to register the document as to the person so denying, appearing or dead:

Provided that, where such officer is a Registrar, he shall follow the procedure prescribed in Part XII:

Provided further that the State Government] may, by notification in the Official Gazette, declare that any Sub-Registrar named in the notification shall, in respect of documents the execution of which is denied, be deemed to be a Registrar for the purposes of this sub-section and of Part XII.

**57. Registering officers to allow inspection of certain books and indexes, and to give certified copies of entries.-**(I) Subject to the previous payment of the fees payable in that behalf, the Books Nos. 1 and 2 and the Indexes relating to Book No.1 shall be at all times open to inspection by any person applying to inspect the same; and, subject to the provisions of section 62, copies of entries in such books shall be given to all persons applying for such copies.

(2) Subject to the same provisions, copies of entries in Book No.3 and in the Index relating thereto shall be given to persons executing the documents to which such entries relate, or to their agents, and after the death of the executants (but not before) to any person applying for such copies.

(3) Subject to the same provisions, copies of entries in Book No.4 and in the Index relating thereto shall be given to any person executing or claiming under the documents to which such entries respectively refer, or to his agent or representative.

(4) The requisite search under this section for entries in Books Nos. 3 and 4 shall be made only by the registering officer.

(5) All copies given under this section shall be signed and sealed by the registering officer, and shall be admissible for the purpose of proving the contents of the original documents.

**65. Procedure where document relates to land in several districts.-**(1) Every Sub Registrar on registering a non-testamentary document relating to immovable property situate in more districts than one shall also forward a copy thereof and of the endorsement and certificate (if any) thereon, together with a copy of the map or plan (if any) mentioned in section 21, to the Registrar of every district in which any part of such property is situate other than the district in which his own sub-district is situate.

(2) The Registrar on receiving the same shall file in his Book No.1 the copy of the document and the copy of the map or plan (if any), and shall forward a memorandum of the document to each of the Sub-Registrars subordinate to him within whose sub-district any part of such property is situate; and every Sub-Registrar receiving such memorandum shall file it in his Book No. 1.

**69. Power of Inspector General to superintend registration offices and make rules.-**(l) The Inspector General shall exercise a general superintendence over all the registration offices in the territories under the 52[State Government], and shall have power from time to time to make rules consistent with this Act- (a) providing for the safe custody of books, papers and documents 53[* * *]; 54[(aa) providing the manner in which and the safeguards subject to which the books may be kept in computer floppies or diskettes or in any other electronic form under subsection (1) of section 16-A;] (b) declaring what language shall be deemed to be commonly used in each district; (c) declaring what territorial divisions shall be recognized under section 21; (d) regulating the amount of fines imposed under sections 25 and 34, respectively; (e) regulating the exercise of the discretion reposed in the registering officer by section 63; (f) regulating the form in which registering officers are to make memoranda of documents; (g) regulating the authentication by Registrars and Sub-Registrars of the books kept in their respective offices under section 51;]

55[(gg) regulating the manner in which the instruments referred to in sub-section (2) of section 88 may be presented for registration;] (h) declaring the particular to be contained in Indexes Nos. 1/ II, III and IV, respectively; (i) declaring the holidays that shall be observed in the registration offices; and (j) generally, regulating the proceedings of the Registrars and Sub Registrars. (2) The rules so made shall be submitted to the 56[State Government] for approval, and, after they have been approved, they shall be published in the 5 [Official Gazette], and on publication shall have effect as if enacted in this Act. State Amendments-[Andhra Pradesh].-In its applicati

**xxx** **xxx** **xxx**

Govt. Press, Vikasa Soudha, Bengaluru, 20th Feb, 2024, P7, W.D. , Copies 500